# ಕರ್ಮಸಿದ್ಧಾಂತ – ಒಂದು ವಿಶ್ಲೇಷಣೆ

ಎಚ್.ಎಲ್. ಸೀತಾದೇವಿ

**ಭಾರತೀಯ ತತ್ತ್ವಶಾಸ್ತ್ರವು ಕರ್ಮಸಿದ್ಧಾಂತವನ್ನು ಎತ್ತಿ ಹಿಡಿಯುತ್ತದೆ. ನಾವು ಅನುಭವಿಸುವ ಸುಖ ಅಥವಾ ದುಃಖಕ್ಕೆ ನಾವೇ ಜವಾಬ್ದಾರರು ಎಂಬುದೇ ಇದರ ತಿರುಳು. ಇದನ್ನು ಅನೇಕ ಉಲ್ಲೇಖಗಳ ಮೂಲಕ ವಿವರಿಸಿರುವ ಲೇಖಕಿ 'ಕನ್ನಡಪ್ರಭ' ಪತ್ರಿಕೆಯ ಉಪ ಸುದ್ದಿ ಸಂಪಾದಕರು ಮತ್ತು ಆಕಾಶವಾಣಿಯ ವಾರ್ತಾಪ್ರಸಾರಕರು ಕೂಡ ಆಗಿದ್ದವರು. ಈಗ ಮೈಸೂರು ನಿವಾಸಿಗಳಾಗಿರುವ ಇವರು ಸಾಹಿತ್ಯಾಸಕ್ತರು, ಉತ್ತಮ ಲೇಖಕರು.**

**ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಮ್** ಅಂದರೆ ನಾವು ಮಾಡುವ ಒಳ್ಳೆಯ ಅಥವಾ ಕೆಟ್ಟ ಕೆಲಸಗಳ ಫಲವನ್ನು ಅನುಭವಿಸಿಯೇ ತೀರಬೇಕು ಎಂದರ್ಥ. ಭಾರತೀಯರಾದ ನಾವು ಈ ಕರ್ಮಸಿದ್ಧಾಂತವನ್ನು ನಂಬುತ್ತೇವೆ.

ಇಲ್ಲಿ 'ಕರ್ಮ' ಎಂದರೆ ಕೆಲಸ ಎಂದರ್ಥ. ಒಳ್ಳೆಯ ಕೆಲಸಗಳಿಗೆ ಒಳ್ಳೆಯ ಫಲ, ಕೆಟ್ಟ ಕೆಲಸಗಳಿಗೆ ಕೆಟ್ಟ ಫಲ. ಅದನ್ನೇ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ, **ನ ಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತ ಗಚ್ಛತಿ** – "ಮಗೂ, ಒಳ್ಳೆಯದನ್ನು ಮಾಡಿದವನಿಗೆ ಎಂದೂ ಕೆಡುಕಾಗುವುದಿಲ್ಲ" ಎನ್ನುತ್ತಾನೆ.

**ಬುದ್ಧಿಃ ಕರ್ಮಾನುಸಾರಿಣೀ** – ನಮ್ಮ ಕರ್ಮಕ್ಕೆ ಅನುಗುಣವಾಗಿ ನಮ್ಮ ಬುದ್ಧಿ ಕೆಲಸ ಮಾಡುತ್ತದೆ. ಅರ್ಜುನ ಕುರುಕ್ಷೇತ್ರದಲ್ಲಿ ಒಂದು ಕ್ಷಣ ಕರ್ತವ್ಯವಿಮೂಢನಾಗಿ, "ನಾನು, ನನ್ನ ಬಂಧುಬಾಂಧವರು, ಗುರುಹಿರಿಯರು, ಸ್ನೇಹಿತರೊಡನೆ ಹೇಗೆ ಯುದ್ಧ ಮಾಡಲಿ?" ಎಂದು ಕೈಚೆಲ್ಲಿ ಕೂತಾಗ ಶ್ರೀಕೃಷ್ಣನು ಅವನಿಗೆ ಹೀಗೆ ತಿಳಿಹೇಳುತ್ತಾನೆ :

**ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।**
**ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಽಸ್ತ್ವಕರ್ಮಣಿ ॥**

"ಕೆಲಸ ಮಾಡುವುದಷ್ಟೇ ನಿನ್ನ ಕರ್ತವ್ಯ. ಫಲಾಫಲಗಳ ಚಿಂತೆ ಬಿಡು. ಕರ್ಮಫಲದಲ್ಲಿ ಆಸಕ್ತಿ ಇಲ್ಲದಿರಲಿ. ಹಾಗೆಂದು ಮಾಡಬೇಕಾದ ಕರ್ಮವನ್ನು ಬಿಡಲೂ ಬೇಡ."

ಅದಲ್ಲದೆ ಶ್ರೀಕೃಷ್ಣನು, **ಯೋಗಸ್ಥಃ ಕುರು ಕರ್ಮಾಣಿ** – "ಯೋಗದಲ್ಲಿ ಇದ್ದುಕೊಂಡು ಕರ್ಮ ಮಾಡು" ಎಂದು ಅರ್ಜುನನಿಗೆ ಬುದ್ಧಿ ಹೇಳುತ್ತಾನೆ.

ನಮ್ಮ ನಮ್ಮ ಕರ್ಮಗಳಿಗೆ ತಕ್ಕಂತೆ ಪಾಪಪುಣ್ಯಗಳು ನಮಗೆ ಒದಗಿಬರುತ್ತವೆ. ಇವು ಕಣ್ಣಿಗೆ ಕಾಣುವುದಿಲ್ಲವಾದ್ದರಿಂದ ಅವಕ್ಕೆ 'ಅದೃಷ್ಟ' ಎಂದು ಹೆಸರು. ಹಾಗೆಯೇ ಅವು ದೇವರೇ ಮಾಡಿರುವ ನಿಯಮಗಳಾದ್ದರಿಂದ 'ದೈವ' ಎನಿಸಿಕೊಳ್ಳುತ್ತವೆ. **ಪೂರ್ವಜನ್ಮ ಕೃತಂ ಕರ್ಮ ತದ್ದೈವಮಿತಿ ಕಥ್ಯತೇ** – ಪೂರ್ವಜನ್ಮದ ಕರ್ಮವನ್ನೇ ದೈವ ಎನ್ನುತ್ತಾರೆ.

ಪ್ರಪಂಚ ನಿಂತಿರುವುದೇ ಕರ್ಮಸೂತ್ರದ ಆಧಾರದ ಮೇಲೆ. ಅದನ್ನೇ ಒಂದು ಸುಭಾಷಿತ ಹೀಗೆ ಹೇಳುತ್ತದೆ:

**ಸುಖಸ್ಯ ದುಃಖಸ್ಯ ನ ಕೋಽಪಿ ದಾತಾ**
**ಪರೋ ದದಾತೀತಿ ಕುಬುದ್ಧಿರೇಷಾ।**
**ಅಹಂ ಕರೋಮೀತಿ ವೃಥಾಭಿಮಾನಃ**
**ಸ್ವಕರ್ಮಸೂತ್ರಗ್ರಥಿತೋ ಹಿ ಲೋಕಃ॥**

"ಸುಖ–ದುಃಖಗಳನ್ನು ಯಾರೂ ಕೊಡುವುದಿಲ್ಲ. ಬೇರೆಯವರಿಂದ ಆಗುತ್ತದೆ ಎನ್ನುವುದು ಸರಿಯಾದ ವಿವೇಚನೆಯಲ್ಲ. 'ನಾನು ಮಾಡುತ್ತೇನೆ' ಎನ್ನುವುದು ಕೂಡ ಬರೀ ದುರಭಿಮಾನ. ಈ ಪ್ರಪಂಚ ತನ್ನ ಕರ್ಮಸೂತ್ರದಿಂದಲೇ ಬದ್ಧವಾಗಿದೆ."

ಕರ್ಮ ಅದೆಷ್ಟು ಬಲವತ್ತರವಾದುದು ಎನ್ನುವುದನ್ನು ಭರ್ತೃಹರಿ ಹೀಗೆ ವಿವರಿಸುತ್ತಾನೆ:

**ಬ್ರಹ್ಮಾ ಯೇನ ಕುಲಾಲವನ್ನಿಯಮಿತೋ**
**ಬ್ರಹ್ಮಾಂಡಭಾಂಡೋದರೇ**
**ವಿಷ್ಣುರ್ಯೇನ ದಶಾವತಾರಗಹನೇ ಕ್ಷಿಪ್ತೋ ಮಹಾಸಂಕಟೇ।**
**ರುದ್ರೋ ಯೇನ ಕಪಾಲಪಾಣಿಪುಟಕೇ ಭಿಕ್ಷಾಟನಂ ಸೇವತೇ**
**ಸೂರ್ಯೋ ಭ್ರಾಮ್ಯತಿ ನಿತ್ಯಮೇವ ಗಗನೇ**
**ತಸ್ಮೈ ನಮಃ ಕರ್ಮಣೇ॥**

"ಬ್ರಹ್ಮ, ಈ ಬ್ರಹ್ಮಾಂಡವೆಂಬ ಮಡಕೆಯಲ್ಲಿ ಕುಂಬಾರನ ಕೆಲಸ ಮಾಡುತ್ತಿದ್ದಾನೆ. ವಿಷ್ಣುವಾದರೋ ಹತ್ತು ಅವತಾರಗಳ ಮಹಾಸಂಕಟದಲ್ಲಿ ಸಿಕ್ಕಿಬಿದ್ದಿದ್ದಾನೆ. ಮೃತ್ಯುಂಜಯನಾದ ಶಿವನು ಬ್ರಹ್ಮಕಪಾಲವನ್ನು ಹಿಡಿದು ಭಿಕ್ಷೆ ಬೇಡುತ್ತಿದ್ದಾನೆ. ಸಕಲ ಲೋಕಗಳಿಗೂ ಆಧಾರನಾದ ಸೂರ್ಯನು ತನಗೇ ಸ್ವತಃ ನೆಲೆಯಿಲ್ಲದೆ ನಿತ್ಯವೂ ಆಕಾಶದಲ್ಲಿ ಸುತ್ತುತ್ತಿದ್ದಾನೆ. ಇದಕ್ಕೆಲ್ಲಾ ಮೂಲಕಾರಣವಾದ ಕರ್ಮಕ್ಕೆ ದೊಡ್ಡ ನಮಸ್ಕಾರ."

ನಾವು ಮಾಡುವ ಒಳ್ಳೆಯ ಕೆಲಸಗಳಿಗೆ ಒಳ್ಳೆಯ ಫಲ, ಕೆಟ್ಟ ಕೆಲಸಗಳಿಗೆ ಕೆಟ್ಟ ಫಲ ಸಿಗುವುದು ಖಚಿತವೇ ಆದರೂ ಅದು ತಕ್ಷಣಕ್ಕೆ ಅನುಭವಕ್ಕೆ ಬರದೇ ಹೋಗಬಹುದು. ಅದನ್ನೇ ಧಮ್ಮಪದವು ಹೀಗೆ ಹೇಳುತ್ತದೆ:

**ನ ಹಿ ಪಾಪಕೃತಂ ಕರ್ಮ ಸದ್ಯಃ ಪಚತಿ ಕ್ಷೀರವತ್।**
**ನಿಗೂಢಂ ದಹತೀಹೈನಂ ಭಸ್ಮಛನ್ನಾಗ್ನಿವಚ್ಚಿರಮ್॥**

"ಪಾಪಕರ್ಮಗಳು ಹಾಲಿನಂತೆ ಕೂಡಲೇ ಜೀರ್ಣವಾಗಿ ಫಲವನ್ನು ಕೊಡುವುದಿಲ್ಲ. ಅವು ಬೂದಿ ಮುಚ್ಚಿದ ಕೆಂಡದಂತೆ ರಹಸ್ಯವಾಗಿದ್ದು, ಬಹಳ ಕಾಲದವರೆಗೂ ಸುಡುತ್ತಲೇ ಇರುತ್ತವೆ."

**ಕರ್ಮಾಯತ್ತಂ ಫಲಂ ಪುಂಸಾಂ ಬುದ್ಧಿಃ ಕರ್ಮಾನುಸಾರಿಣೀ।**
**ತಥಾಽಪಿ ಸುಧಿಯಾ ಭಾವ್ಯಂ ಸುವಿಚಾರ್ಯೈವ ಕುರ್ವತಾಂ॥**

"ಈಗಿನ ಫಲವು ನಮ್ಮ ಪೂರ್ವಜನ್ಮದ ಕರ್ಮಕ್ಕನುಸಾರವಾಗಿ ಸಿಕ್ಕಿದೆ. ನಮ್ಮ ಬುದ್ಧಿಯೂ ಕರ್ಮಕ್ಕೆ ಅನುಸಾರವಾಗಿಯೇ ಪ್ರವರ್ತಿಸುತ್ತದೆ. ಆದ್ದರಿಂದ ಬುದ್ಧಿವಂತರಾದವರು ಬುದ್ಧಿಯನ್ನು ಹಿಡಿತದಲ್ಲಿ ಇಟ್ಟುಕೊಂಡು, ವಿವೇಕದಿಂದ ವರ್ತಿಸಿ, ಮುಂದೆ ಬರುವ ಫಲವು ಒಳ್ಳೆಯದಾಗಿರುವಂತೆ ನೋಡಿಕೊಳ್ಳಬೇಕು."

ಹೀಗೆ ಭಾರತೀಯ ತತ್ತ್ವಶಾಸ್ತ್ರವು ಕರ್ಮಸಿದ್ಧಾಂತವನ್ನು ವಿಶ್ಲೇಷಿಸುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ **'ಮಾಡಿದ್ದುಣ್ಣೋ ಮಹಾರಾಯ'** ಎನ್ನುವುದು ಸಾರ್ವಕಾಲಿಕವಾದ ಸತ್ಯ.

★

# ಪರಮಪೂಜ್ಯ ಸ್ವಾಮಿ ಭೂತೇಶಾನಂದಜಿ ಮಹಾರಾಜ್ ಅವರ ಸವಿನೆನಪುಗಳು

## ಪರಿಹಾರ ಕಾರ್ಯದಲ್ಲಿ ಸ್ವಾಮಿ ಭೂತೇಶಾನಂದಜಿ

ಬ್ರಹ್ಮಚಾರಿ ಜ್ಞಾನಾತ್ಮಚೈತನ್ಯ



**ಪರಮಪೂಜ್ಯ ಸ್ವಾಮಿ ಭೂತೇಶಾನಂದಜಿ ಮಹಾರಾಜ್ ಅವರು ರಾಮಕೃಷ್ಣ ಮಹಾಸಂಘದ ೧೨ನೆಯ ಪರಮಾಧ್ಯಕ್ಷರು. ಸ್ವಾಮೀಜಿಯವರು ಸುಮಾರು ಏಳು ದಶಕಗಳಿಗೂ ಹೆಚ್ಚು ಕಾಲ ಮಹಾಸಂಘದ ಕಾರ್ಯಚಟುವಟಿಕೆಗಳ ಮೂಲಕ ದಿವ್ಯತ್ರಯರ ಸೇವಾರಾಧನೆಯನ್ನು ಮಾಡಿದ ಮಹನೀಯರು. ಈ ಅವಧಿಯ ಅವರ ನೆನಪುಗಳು ಎಲ್ಲರಿಗೂ ಸ್ಫೂರ್ತಿದಾಯಕವಾದುವು. ಇದನ್ನು ಸಂಗ್ರಹಿಸಿ, ಅನುವಾದಿಸಿ ಅತ್ಯಾಕರ್ಷಕ ರೂಪದಲ್ಲಿ ನಮಗಿತ್ತಿರುವ ಬ್ರಹ್ಮಚಾರಿ ಜ್ಞಾನಾತ್ಮಚೈತನ್ಯ ಅವರು ಬೃಂದಾವನದಲ್ಲಿರುವ ರಾಮಕೃಷ್ಣ ಮಿಷನ್ ಸೇವಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.**

"ಭೂತೇಶಾನಂದ! ಇದೆಂತಹ ಹೆಸರು? ಮಠದ ಅಧ್ಯಕ್ಷರ ಬಳಿ ಹೋಗಿ ಬೇರೊಂದು ಹೆಸರಿಗಾಗಿ ಪ್ರಾರ್ಥಿಸಿಕೋ. ಇಲ್ಲವಾದರೆ ಎಲ್ಲರೂ 'ಭೂತ, ಭೂತ' ಎಂದು ಕರೆಯಲಾರಂಭಿಸುವರು" ಎಂದು ಆಗ ತಾನೇ ಸಂನ್ಯಾಸ ಸ್ವೀಕರಿಸಿದ್ದ ಬ್ರಹ್ಮಚಾರಿ ಪ್ರಿಯಚೈತನ್ಯರಿಗೆ (ವಿಜಯ ಕೃಷ್ಣರಾಯ) ಕೆಲವರು ಸೂಚಿಸಿದರು. ತಮಗೆ 'ಭೂತೇಶಾನಂದ' ಎಂಬ ಹೆಸರೇ ಮೆಚ್ಚುಗೆಯಾಗಿದೆ ಎಂದು ಪ್ರತ್ಯುತ್ತರ ನೀಡಿದ ಆ ಯುವಸಂನ್ಯಾಸಿ ಮುಂದೆ ರಾಮಕೃಷ್ಣ ಮಹಾಸಂಘದ ಹನ್ನೆರಡನೆಯ ಪರಮಾಧ್ಯಕ್ಷರಾದರು. ಆ ಹೆಸರನ್ನು ಅವರು ಸಮರ್ಥಿಸಿಕೊಂಡ ರೀತಿ ಹೀಗಿತ್ತು:

೧. ಶಿವನಾಮಾವಲ್ಯಷ್ಟಕದಲ್ಲಿ ಶಿವನನ್ನು ಸ್ತುತಿಸುವುದು **ಭೂತೇಶ–ಭೀತ–ಭಯಸೂದನ ಮಾಮನಾಥ** ಎಂದಲ್ಲವೇ?

೨. ಭಗವದ್ಗೀತೆಯಲ್ಲಿ (೧೦:೧೫) ಅರ್ಜುನನು ಭಗವಂತನ ವಿಭೂತಿಗಳನ್ನು ವರ್ಣಿಸುತ್ತಾ ಹೇಳುವುದು, **ಭೂತಭಾವನ ಭೂತೇಶ ದೇವದೇವ ಜಗತ್ಪತೇ** – "ಹೇ ಪುರುಷೋತ್ತಮ, ನೀನು ಭೂತಗಳ (ಜೀವಿಗಳ) ತಂದೆ, ಭೂತಗಳ (ಜೀವಿಗಳ) ಒಡೆಯ, ದೇವದೇವ, ಜಗದೀಶ್ವರ" ಎಂದೇ.

೩. ವ್ಯಾಕರಣದ ರೀತಿಯಲ್ಲಿ ನೋಡಿದಾಗ ಅ. **ಭೂತಾನಾಮ್ ಈಶ ಭೂತೇಶ** – ಭೂತಗಳ (ಜೀವಿಗಳ) ಒಡೆಯನು ಭೂತೇಶ (ಷಷ್ಠೀ ತತ್ಪುರುಷ ಸಮಾಸ) ಆ. **ಭೂತೇಶೇ ಆನಂದಂ ಯಸ್ಯ ಸಃ ಭೂತೇಶಾನಂದಃ** – ಭೂತೇಶನಲ್ಲಿ ಯಾರಿಗೆ ಆನಂದವೋ ಅವನು ಭೂತೇಶಾನಂದ (ಬಹುವ್ರೀಹಿ ಸಮಾಸ) ಅಂದರೆ ಭೂತೇಶನಾದ ಪರಮಾತ್ಮನಲ್ಲಿ ಯಾರು ಆನಂದವನ್ನು ಕಂಡುಕೊಂಡಿರುತ್ತಾನೋ, ಬೇರೆ ಯಾವುದರಿಂದಲೂ ಆನಂದವನ್ನು ಹೊಂದುವುದಿಲ್ಲವೋ ಅಂಥವನೇ ಭೂತೇಶಾನಂದ.

"ಹೀಗೆ ಸುಂದರವಾದ, ಅರ್ಥಗರ್ಭಿತವಾದ ಹೆಸರು ನನಗೆ ದೊರೆತಿರುವಾಗ ಬೇರೆಯ ಹೆಸರಿಗಾಗಿ ಬೇಡುವುದು ಅನವಶ್ಯಕ" ಎಂದರು ಆ ಯುವಸಂನ್ಯಾಸಿ. ಪ್ರಕಾಂಡ ಪಂಡಿತರಾಗಿದ್ದರೂ ಅವರದ್ದು ನೀರಸ ವ್ಯಕ್ತಿತ್ವವಲ್ಲ. ಅವರು ಆಧ್ಯಾತ್ಮಿಕ ಆನಂದವನ್ನು ಅನುಭವಿಸಿದ್ದರು; ಆ ಆನಂದದ ಬಲದಿಂದ ಇತರರಿಗೂ ಮಮತೆ, ಪ್ರೀತಿ–ಸ್ನೇಹ–ಸೌಹಾರ್ದಗಳನ್ನು ನೀಡುತ್ತಿದ್ದರು; ಹಾಗೆಯೇ ತಮ್ಮ ಬಳಿ ಬಂದ ಆಧ್ಯಾತ್ಮಿಕ ಪಿಪಾಸುಗಳಿಗೆ ಜೀವನದ ಸಾರ್ಥಕತೆಯನ್ನು ಪಡೆದುಕೊಳ್ಳಲು ಸದಾ ನೆರವಾಗುತ್ತಿದ್ದರು.

೧೯೨೩ರಲ್ಲಿ ಇವರು ರಾಮಕೃಷ್ಣ ಮಹಾಸಂಘಕ್ಕೆ, ಬೇಲೂರು ಮಠದಲ್ಲಿ ಸೇರಿ ಅದರ ಫಲವಾಗಿ ಹಲವಾರು ಕಾರ್ಯಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸಿದರು. ರಾಮಕೃಷ್ಣ ಮಹಾಸಂಘವು ಕೇವಲ ಧರ್ಮಪ್ರಚಾರದ ಸಂಸ್ಥೆಯಾಗಿ ಉಳಿಯದೇ ಜನಸಾಮಾನ್ಯರ ಜೀವನದಲ್ಲಿ ಪರಿಣಾಮಕಾರಿ ಪರಿವರ್ತನೆಯನ್ನು ತರಲು ಪ್ರಯತ್ನಿಸುತ್ತಿದೆ. **ಶಿವಜ್ಞಾನೇ ಜೀವಸೇವಾ** – ಜೀವಿಗಳನ್ನೇ ಶಿವನೆಂದು ಭಾವಿಸಿ ಅವರ ಸೇವೆಯನ್ನು ಮಾಡುವ ಆದರ್ಶವನ್ನು ಇಟ್ಟುಕೊಂಡು, ಆಸ್ಪತ್ರೆಗಳು, ಶಾಲಾಕಾಲೇಜುಗಳು, ಪ್ರಕೃತಿ ವಿಕೋಪಗಳಿಗೆ ತುತ್ತಾದವರ ಸೇವೆ ಮುಂತಾದ ಸೇವಾಕಾರ್ಯಗಳನ್ನು ನಡೆಸುತ್ತಿದೆ. ಸ್ವಾಮಿ ಭೂತೇಶಾನಂದಜಿ ಅವರು ರಾಮಕೃಷ್ಣ ಮಹಾಸಂಘದ ಪರಿಹಾರ ಕಾರ್ಯಗಳಲ್ಲಿ ಪಾಲ್ಗೊಂಡು ಹೇಗೆ ಸೇವೆ ಸಲ್ಲಿಸಿದ್ದರೆಂಬುದನ್ನು ಕೆಲವು ಆಯ್ದ ಘಟನೆಗಳ ಮೂಲಕ ಈಗ ತಿಳಿದುಕೊಳ್ಳೋಣ.

ಓದುಗರಿಗೆ ಇಲ್ಲಿ ಒಂದು ವಿಷಯ ತಿಳಿಸಬೇಕು. ಸ್ವಾಮಿ ಭೂತೇಶಾನಂದಜಿಯವರು ಸಾಮಾನ್ಯವಾಗಿ ತಮ್ಮ ವೈಯಕ್ತಿಕ ವಿಚಾರಗಳ ಬಗ್ಗೆ ಇತರರೊಡನೆ ಮಾತನಾಡಲು ಇಚ್ಛಿಸುತ್ತಿರಲಿಲ್ಲ. ಅವರ ಬಳಿ ದರ್ಶನಕ್ಕಾಗಿ ಹೋದ ಸಾಧು-ಬ್ರಹ್ಮಚಾರಿಗಳೊಡನೆ ಲೋಕಾಭಿರಾಮವಾಗಿ ಮಾತನಾಡುತ್ತಿರುವಾಗ, ಪ್ರಾಸಂಗಿಕವಾಗಿ ಅವರು ಹೇಳಿದ ಕೆಲವು ಅಂಶಗಳೇ ಈ ಲೇಖನದ ಆಧಾರ.

೧೯೪೨ರಲ್ಲಿ ಪಶ್ಚಿಮ ಬಂಗಾಳದ ಮೇದಿನೀಪುರದಲ್ಲಿ ಗಂಗಾ ನದಿಯ ಒಂದು ಭಾಗದ ದಂಡೆ ನೀರಿನ ಒತ್ತಡದಿಂದ ಕುಸಿದು ಬಿದ್ದಿತ್ತು. ಬಹಳ ಜನ ಮನೆಮಠಗಳನ್ನು ಕಳೆದುಕೊಂಡಿದ್ದರು. ಪ್ರಾಣಹಾನಿಯೂ ಸಂಭವಿಸಿತ್ತು. ಆಗ ರಾಮಕೃಷ್ಣ ಮಹಾಸಂಘವು ಸ್ವಾಮಿ ನಿರ್ವಾಣಾನಂದರ ನೇತೃತ್ವದಲ್ಲಿ ಪರಿಹಾರಕಾರ್ಯಗಳನ್ನು ಆರಂಭಿಸಿತು. ಮುಂದಿನ ವಿಚಾರಗಳನ್ನು ಸ್ವಾಮಿ ಭೂತೇಶಾನಂದಜಿಯವರಿಂದಲೇ ಕೇಳೋಣ: "ಒಮ್ಮೆ ನಮ್ಮ ದೋಣಿಯಲ್ಲಿ ಸುಮಾರು ೮೦,೦೦೦ ಸೇರು ಅಕ್ಕಿಯನ್ನು ಸಾಗಿಸುತ್ತಿದ್ದೆವು. ಹಾನಿಗೊಳಗಾದ ದಂಡೆಯನ್ನು ಸುರಕ್ಷಿತವಾಗಿ ದಾಟಿಹೋಗಬೇಕಿದ್ದರೆ ದೋಣಿಯಲ್ಲಿರುವ ನಾಲ್ಕನೆಯ ಒಂದು ಭಾಗದ ಸರಕನ್ನು ಕಡಮೆ ಮಾಡಬೇಕೆಂದು ದೋಣಿಯವರು ಹೇಳಿದರು. ದೋಣಿಯಲ್ಲಿದ್ದ ನಾವೆಲ್ಲರೂ ನಮ್ಮ ಬೆನ್ನುಗಳ ಮೇಲೆ ಆ ಚೀಲಗಳನ್ನು ಹೊತ್ತು ಬೇರೆ ದಂಡೆಗೆ ಸಾಗಿಸಿದೆವು. ನೌಕೆ ಸುರಕ್ಷಿತವಾಗಿ ಆ ಸ್ಥಳವನ್ನು ದಾಟಿದ ಮೇಲೆ ಮತ್ತೆ ಸರಕನ್ನು ಆ ನಾವೆಯಲ್ಲಿ ತುಂಬಿಸಿ, ಪ್ರಯಾಣವನ್ನು ಮುಂದುವರಿಸಿದೆವು. ಅದು ದುರ್ಗಾಪೂಜೆಯ ಸಮಯ. ನಾವೆಲ್ಲರೂ ನಮ್ಮ ಕೆಲಸದಲ್ಲಿ ಎಷ್ಟು ಮಗ್ನರಾಗಿದ್ದೆವೆಂದರೆ, ನಮಗೆ ದುರ್ಗಾಪೂಜೆಯ ಅರಿವೇ ಇರಲಿಲ್ಲ. ಡಂಗುರದ ಶಬ್ದವನ್ನು ಕೇಳಿದಾಗಲೇ ಪೂಜೆಯ ನೆನಪಾಯಿತು."

ನಮಗೆಲ್ಲಾ ತಿಳಿದ ಹಾಗೆ ದುರ್ಗಾಪೂಜೆ ಬಂಗಾಳದಲ್ಲಿ ಬಹಳ ಪ್ರಖ್ಯಾತವಾದುದು. ಸಾಮಾನ್ಯವಾಗಿ ಆ ಸಂದರ್ಭದಲ್ಲಿ ಎಲ್ಲರೂ ಹಬ್ಬದ ಮನೋಭಾವದಲ್ಲಿದ್ದು, ಆನಂದದಿಂದ ಪೂಜಾ ದಿನಗಳನ್ನು ಕಳೆಯುತ್ತಾರೆ. ಆದರೆ, ತಮ್ಮ ಸುಖ-ಸಂತೋಷಗಳನ್ನು ಸಂಪೂರ್ಣ ಬದಿಗಿಟ್ಟು ಇತರರ ಸೇವೆಯಲ್ಲಿ ನಿರತರಾಗಿದ್ದ, ಸ್ವಾಮಿ ಭೂತೇಶಾನಂದಜಿ ಅವರಂಥ ನಿಸ್ವಾರ್ಥ ವ್ಯಕ್ತಿಗಳು ಎಷ್ಟು ಜನ ತಾನೆ ಇದ್ದಾರೆ?

**ಪ್ರಶ್ನೆ :** ಸ್ವಾಮೀಜಿ, ನೀವು ಯುದ್ಧಗ್ರಸ್ತ ಬರ್ಮಾ ದೇಶದಿಂದ ಸ್ಥಳಾಂತರಗೊಂಡು ಭಾರತಕ್ಕೆ ಮರಳಿ ಬಂದವರ ಸೇವಾಕಾರ್ಯದಲ್ಲಿಯೂ ಪಾಲ್ಗೊಂಡಿದ್ದೀರೆಂದು ಕೇಳಿದ್ದೇವೆ.

**ಸ್ವಾಮೀಜಿ :** ಅದು ೧೯೪೫ ನೆಯ ಇಸವಿಯಲ್ಲಿ. ಆಗ ನಾನು ಶಿಲ್ಲಾಂಗಿನ ಆಶ್ರಮದ ನಿವಾಸಿಯಾಗಿದ್ದೆ. ರಾಬರ್ಟ್ ರೀಡ್ ಎನ್ನುವವರು ಅಸ್ಸಾಂ ಪ್ರದೇಶವನ್ನು ಆಳುತ್ತಿದ್ದ ಅಂದಿನ ಬ್ರಿಟಿಷ್ ಸರ್ಕಾರದ ಉಪರಾಜ್ಯಪಾಲರಾಗಿದ್ದರು. ಅವರ ಪತ್ನಿ ನನಗೆ ದೂರವಾಣಿ ಕರೆ ಮಾಡಿ ತಮ್ಮನ್ನು ಕಾಣಲು ಪ್ರಾರ್ಥಿಸಿದರು. ಅವರ ಬಳಿ ಹೋದಾಗ ಹೀಗೆ ಹೇಳಿದರು: "ಮಹಾರಾಜ್, ಆ ಪ್ರದೇಶದಲ್ಲಿ ಬಹಳ ಜಾಗರೂಕರಾಗಿರಬೇಕು; ನೀವೇನಾದರೂ ಪರಿಹಾರ ಕಾರ್ಯಕ್ಕೆ ಒಪ್ಪುವುದಾದರೆ ನಿಮಗೆ ನಮ್ಮ ಸಂಪೂರ್ಣ ಸಹಕಾರವಿದೆ." ನಾನು ಜವಾಬ್ದಾರಿ ತೆಗೆದುಕೊಳ್ಳಲು ಒಪ್ಪಿದೆ; ಬೇಲೂರು ಮಠಕ್ಕೆ ತಿಳಿಸಿದೆ. ಅಲ್ಲಿಂದ ನಾನು ಯಾರ ಹೆಸರನ್ನು ಸೂಚಿಸಿದ್ದೆನೋ, ಅವರನ್ನೇ, ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಸ್ವಾಮಿ ಮಾಧವಾನಂದರು ಕಳುಹಿಸಿ ಕೊಟ್ಟರು.

ನಾಗಾಲ್ಯಾಂಡಿನ ಡಿಮಾಪೂರ್ ಪ್ರದೇಶದಲ್ಲಿರುವ ಒಂದು ಶಾಲೆಯಲ್ಲಿ ನಮ್ಮ ವಸತಿಯ ವ್ಯವಸ್ಥೆಯನ್ನು ಮಾಡಿದ್ದರು. ಅಲ್ಲಿ ನಾವು ಹಲವಾರು ಕಾರ್ಯಗಳನ್ನು ಮಾಡಬೇಕಿತ್ತು. ಸಂತ್ರಸ್ತರು ಬಂದಾಗ ಅವರಿಗೆ ಆಹಾರ ನೀಡುವುದು; ಅವರು ಯಾವ ಸ್ಥಳಕ್ಕೆ ಹೋಗಬೇಕೆಂಬುದನ್ನು ವಿಚಾರಿಸಿ, ರೈಲ್ವೇ ಟಿಕೇಟನ್ನು ಮಾಡಿಸಿ ಅವರನ್ನು ಬೀಳ್ಕೊಡುವುದು ಮುಂತಾದವು. ಕೆಲವೊಮ್ಮೆ ಅವರಿಗೆ ಬಟ್ಟೆ ಹಾಗೂ ಆಹಾರದ ಸಾಮಗ್ರಿಗಳನ್ನು ಕೂಡ ವಿತರಿಸುತ್ತಿದ್ದೆವು. ನಮ್ಮ ರಂಗೂನ್ ಆಶ್ರಮವನ್ನು ತ್ಯಜಿಸಿದ ಸ್ವಾಮಿ ಪುಣ್ಯಾನಂದರೂ ಕೂಡ ನಡೆದುಕೊಂಡೇ ನಮ್ಮ ಶಿಬಿರಕ್ಕೆ ಬಂದಿದ್ದರು.

ಸೇವಾಕಾರ್ಯದಲ್ಲಿ ನಿರತರಾದ ಪ್ರತಿಯೊಬ್ಬರಿಗೂ ಒಂದು ಕಿಟ್ ಬ್ಯಾಗ್ ಕೊಡಲಾಗಿತ್ತು. ಏಕೆಂದರೆ ಜಪಾನಿಯರು ಬಾಂಬ್‌ಗಳನ್ನು ಆಗಿಂದಾಗ್ಗೆ ಉರುಳಿಸುತ್ತಿದ್ದರು. ಆ ಸಮಯದಲ್ಲಿ ಕಾರ್ಯಕರ್ತರು ಎಲ್ಲಿರುತ್ತಾರೆಂದು ಹೇಳುವುದು ಅಸಾಧ್ಯ. ಆದ್ದರಿಂದ ಆ ಬ್ಯಾಗಿನಲ್ಲಿ ಅವಲಕ್ಕಿ, ಒಂದು ಹಾಲಿನ ಪುಡಿ ಡಬ್ಬಿ, ಮೋಂಬತ್ತಿ, ಬೆಂಕಿಪೆಟ್ಟಿಗೆ ಹಾಗೂ ಒಂದು ಕೋಲನ್ನು ಇಡಲಾಗಿತ್ತು. "ನೀವು ರಸ್ತೆಯ ಮಾರ್ಗವಾಗಿ ನಡೆದುಕೊಂಡು ಹೋಗಬೇಡಿ. ಬಾಂಬ್‌ಗಳನ್ನು ರಸ್ತೆಯ ಮೇಲೆ ಎಸೆಯುತ್ತಾರೆ. ರಸ್ತೆಯನ್ನು ಗುರುತಿಟ್ಟುಕೊಂಡು ಕಾಡಿನಲ್ಲಿ ನಡೆದುಹೋಗಿ" ಎಂದು ಎಲ್ಲ ಕಾರ್ಯಕರ್ತರಿಗೂ ನಿರ್ದೇಶನ ನೀಡಲಾಗಿತ್ತು.

ಕೆಲವು ದಿನಗಳು ಹೀಗೆಯೇ ನಡೆದುಕೊಂಡು ಹೋಯಿತು. ನಂತರ ಮಳೆ ಪ್ರಾರಂಭವಾಯಿತು. ಶಿಬಿರದ ಎಲ್ಲಾ ದಿಕ್ಕಿನಲ್ಲೂ ಮೊಣಕಾಲಿನವರೆಗೆ ಕೆಸರು ತುಂಬಿತ್ತು. ಅದರೊಂದಿಗೆ ಹೇಸಿಗೆಯೂ ಸೇರಿಕೊಂಡಿತ್ತು. ವಿಪರೀತ ವಾಸನೆ. ಆ ದಾರಿಯಲ್ಲಿ ಹೋಗುವವರೆಲ್ಲರೂ, "ನೀವೆಲ್ಲ ಹೇಗೆ ಇಲ್ಲಿ ಇದ್ದೀರಾ?" ಎಂದೇ ಕೇಳುತ್ತಿದ್ದರು. ಊಟ ಮಾಡುವ ಮುಂಚೆ ಶಾಲಾಕಟ್ಟಡದಲ್ಲಿ ಫಿನಾಯಿಲ್ ಚಿಮುಕಿಸಿಕೊಂಡು, ನೆಲದ ಮೇಲೆ ಕುಳಿತು ಊಟ ಮಾಡುತ್ತಿದ್ದೆವು. ಆದರೆ ಆ ಫಿನಾಯಿಲ್ ವಾಸನೆಯನ್ನು ಎಷ್ಟು ಹೊತ್ತು ತಾನೇ ಸಹಿಸಿಕೊಳ್ಳುವುದು?

**ಪ್ರಶ್ನೆ :** ಸ್ವಾಮೀಜಿ, ಶರಣಾರ್ಥಿಗಳ ಊಟದ ವ್ಯವಸ್ಥೆಯನ್ನು ಹೇಗೆ ನಿಭಾಯಿಸಿದಿರಿ?

**ಸ್ವಾಮೀಜಿ:** ಅವರಿಗೆ ಉಪಾಹಾರಗೃಹದ ವ್ಯವಸ್ಥೆಯನ್ನು ಮಾಡಲಾಗಿತ್ತು. ಬಂದವರಿಗೆ ಊಟದ ಟಿಕೇಟುಗಳನ್ನು ವಿತರಿಸುತ್ತಿದ್ದೆವು. ಉಪಾಹಾರಗೃಹದ ವ್ಯವಸ್ಥಾಪಕರು ನಮ್ಮಲ್ಲಿಗೆ ಬಂದು ಲೆಕ್ಕವನ್ನು ಒಪ್ಪಿಸಿ, ಹಣದ ಬಿಡುಗಡೆಗೆ ಬೇಕಾದ ಪತ್ರಗಳಿಗೆ ಸಹಿ ಹಾಕಿಸಿಕೊಂಡು ಹೋಗುತ್ತಿದ್ದರು. ಶರಣಾರ್ಥಿಗಳ ಊಟವೆಂದರೆ ಅನ್ನ ಮತ್ತು ಬೇಳೆ; ಮತ್ತೆ ಬೇರೆ ಇನ್ನೇನೂ ಇಲ್ಲ.

**ಪ್ರಶ್ನೆ :** ಸ್ವಾಮೀಜಿ, ಕುಡಿಯುವ ನೀರಿನ ವ್ಯವಸ್ಥೆ ಹೇಗಿತ್ತು?

**ಸ್ವಾಮೀಜಿ:** ನಾವು ಕೆರೆಯ ನೀರನ್ನೇ ಕುಡಿಯುತ್ತಿದ್ದೆವು.

**ಸಂತರ ಲಕ್ಷಣಗಳು**

ಸಾರ್ವಭೌಮನು ಸೃಷ್ಟಿಯೊಳಗೊರ್ವನೆ ಕಾಣೊ
ಸರ್ವವನು ತನ್ನಾತ್ಮವೆಂದು ಬದುಕುವನು
ನಿರ್ವಿಕಾರಾಂತರಂಗದಿ ಜಗವ ಧರಿಸುವನು
ಸರ್ವಮಂಗಳನವನು – ಮಂಕುತಿಮ್ಮ

ಗರ್ವಪಡದುಪಕಾರಿ, ದರ್ಪ ಬಿಟ್ಟಧಿಕಾರಿ
ನಿರ್ವಿಕಾರದ ನಯನದಿಂ ನೋಳ್ಪದಾರಿ
ಸರ್ವಧರ್ಮಾಧಾರಿ, ನಿರ್ವಾಣಸಂಚಾರಿ
ಉರ್ವರಿಗೆ ಗುರುವವನು – ಮಂಕುತಿಮ್ಮ

ಜಗದ ಕಲ್ಯಾಣದೊಳಗಾತ್ಮಕಲ್ಯಾಣವನು
ಜಗದ ಬೀದಿಗಳೊಳು ನಿಜಾತ್ಮಯಾತ್ರೆಯನು
ಜಗದ ಜೀವಿತದಿ ನಿಜಜೀವಿತದ ಪೂರ್ತಿಯನು
ಬಗೆಯಲರಿತವನೆ ಸುಖಿ – ಮಂಕುತಿಮ್ಮ

ಕಾಲರಾ ಶುರುವಾದ ಮೇಲಂತೂ ಜನರಿಗೆ ನೀರಿನ ತೊಂದರೆ ಜಾಸ್ತಿಯಾಯಿತು. ನನಗೆ ಈಗ ನೆನಪಾಗುತ್ತಿದೆ. ಒಮ್ಮೆ ರೋಗಿಯೊಬ್ಬ ರಸ್ತೆಯ ಬದಿಯಲ್ಲಿ ಬಿದ್ದಿದ್ದನು. ಸೊಳ್ಳೆಗಳು ಅವನನ್ನು ಸಂಪೂರ್ಣವಾಗಿ ಮುತ್ತಿಗೆ ಹಾಕಿದ್ದವು. ಆ ರೋಗಿಯ ಪ್ರಾಣ ಹೋಗುವ ಸಂಭವವಿತ್ತು. ಉಡುಗೆ ತೊಡಿಗೆಗಳನ್ನು ನೋಡಿದರೆ ಅವನು ಒಬ್ಬ ಅಧಿಕಾರಿ ಇರಬೇಕೆಂದುಕೊಂಡೆ. ರೋಗಿಯನ್ನು ಶಿಬಿರಕ್ಕೆ ಸ್ಥಳಾಂತರಿಸಿದಾಗ "ನೀರು ನೀರು" ಎಂದು ಬಾಯಿ ಬಿಡುತ್ತಿದ್ದ. ಹತ್ತಿರದಲ್ಲಿದ್ದ ಶರಣಾರ್ಥಿಗೆ ನೀರು ತರಲು ಹೇಳಿದಾಗ, "ನಾನು ಅವನ ಹತ್ತಿರ ಬರುವುದಿಲ್ಲ" ಎಂದು ಉತ್ತರವನ್ನು ನೀಡಿದ. "ನಿನ್ನನ್ನು ಇಲ್ಲಿಂದ ಹೊರಗೆ ಕಳಿಸುವೆ" ಎಂದು ರೇಗಿದಾಗ, ಬೇರೇನೂ ವಿಧಿ ಇಲ್ಲದೆ ನೀರನ್ನು ತಂದುಕೊಟ್ಟ. ನಂತರ ಆ ರೋಗಿಯನ್ನು ಬೇರೆ ಕಡೆಗೆ ಸ್ಥಳಾಂತರಿಸಿ ಔಷಧೋಪಚಾರಗಳನ್ನು ಮಾಡಲಾಯಿತು; ಅವನು ಹೇಗೋ ಬದುಕಿಕೊಂಡ. ಆದರೆ ಬಹಳ ಜನ ರೋಗಗಳಿಗೆ ತುತ್ತಾಗಿ ತಮ್ಮ ಪ್ರಾಣ ಕಳೆದುಕೊಂಡರು.

**ಪ್ರಶ್ನೆ :** ಮಹಾರಾಜ್, ಅಲ್ಲಿ ವಿದ್ಯುತ್ ಸರಬರಾಜು ಇತ್ತೆ?

**ಸ್ವಾಮೀಜಿ :** ಇಲ್ಲ, ಇಲ್ಲ. ನಮ್ಮ ಬಳಿ ಇದ್ದ ಕೆಲವು ಸೀಮೆಎಣ್ಣೆಯ ಲಾಟೀನುಗಳನ್ನು ಬಳಸುತ್ತಿದ್ದೆವು. ಕತ್ತಲಲ್ಲಿ ಜನ ಕೆಸರಿನಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳುವ ವಿಷಯ ತಿಳಿದು ಬಂದಾಗ, ಪೆಟ್ರೋಮ್ಯಾಕ್ಸ್ ಲಾಂದ್ರಗಳನ್ನು ಬೆಳಗಿಸಲಾಯಿತು. ಆಗ ಬ್ಲ್ಯಾಕ್ ಔಟ್ (ಶತ್ರುಗಳಿಗೆ ಸ್ಥಳದ ಸೂಚನೆ ಕೊಡದಂತೆ ಸಂಪೂರ್ಣ ಕತ್ತಲೆಯನ್ನು ವಿಧಿಸುವುದು) ರೂಢಿಯಲ್ಲಿತ್ತು. ಆದ್ದರಿಂದ ಮಿಲಿಟರಿ ಕಮ್ಯಾಂಡರ್ ಅದನ್ನು ಆಕ್ಷೇಪಿಸಿದರು. "ಬೆಳಕನ್ನು ಹೆಚ್ಚಿಸಿ ಜಪಾನೀಯರ ಬಾಂಬ್‌ಗಳನ್ನು ಆಮಂತ್ರಿಸುತ್ತಿದ್ದೀರೇನು?" ಎಂದು ಅವರು ಕೇಳಿದರು. "ಜನ ಕೆಸರಿನಲ್ಲಿ ಬಿದ್ದು ಸಾಯುತ್ತಿದ್ದಾರೆ. ನಾನೇನು ಮಾಡಬೇಕೆಂದು ನೀವೇ ಹೇಳಿ" ಎಂದು ನಾನು ಮರುಪ್ರಶ್ನೆ ಹಾಕಿದಾಗ ಸುಮ್ಮನಾದರು. ಮತ್ತೇನೂ ವಿರೋಧ ಬರಲಿಲ್ಲ.

**ಪ್ರಶ್ನೆ :** ಸ್ವಾಮೀಜಿ, ಮೃತದೇಹಗಳ ಸಂಸ್ಕಾರವನ್ನು ಹೇಗೆ ಮಾಡುತ್ತಿದ್ದಿರಿ?

**ಸ್ವಾಮೀಜಿ :** ಶವಗಳನ್ನು ಮಣ್ಣು ಮಾಡುತ್ತಿದ್ದೆವು. ಬೇರೆ ದಾರಿಯೇ ಇರಲಿಲ್ಲ. ಸರ್ಕಾರ ೨೦೦ ಜನ ಶವಸಂಸ್ಕಾರ ಮಾಡುವವರನ್ನು ನೀಡಿತ್ತು.

ಒಂದು ಘಟನೆ ನೆನಪಿಗೆ ಬರುತ್ತಿದೆ, ಕೇಳು. ಒಂದು ಬಂಗಾಳಿ ಕುಟುಂಬ ನಮ್ಮ ಶಿಬಿರಕ್ಕೆ ಬಂದಿತ್ತು. ಗಂಡ ನಮ್ಮ ಕ್ಯಾಂಪಿನಲ್ಲೇ ಮಲೇರಿಯಾ ಜ್ವರದಿಂದ ಅಸುನೀಗಿದ. ಅವನ ಹೆಂಡತಿ ನನ್ನ ಕಾಲುಗಳನ್ನು ಹಿಡಿದುಕೊಂಡು ಅಳಲಾರಂಭಿಸಿದಳು. ತನ್ನ ಗಂಡನ ದೇಹವನ್ನು ದಹಿಸಬೇಕೆಂದು ಅವಳು ಪ್ರಾರ್ಥಿಸಿಕೊಂಡಳು. ಸರಿ, ಪ್ರಯತ್ನಿಸುತ್ತೇನೆಂದು ಆಶ್ವಾಸನೆಯನ್ನು ನೀಡಿ ನಮ್ಮ ಶಿಬಿರದ ಮುಖ್ಯ ವೈದ್ಯರ ಬಳಿ ಹೋದೆ. ಅವರ ಪರಿಚಯ ನನಗೆ ಶಿಲ್ಲಾಂಗಿನಲ್ಲೇ ಆಗಿತ್ತು. "ನೀವು ಆ ಶವವನ್ನು ಸಂಪೂರ್ಣವಾಗಿ ಸುಡುವ ಜವಾಬ್ದಾರಿ ತೆಗೆದುಕೊಳ್ಳುವುದಾದರೆ ಮಾತ್ರ ನನ್ನ ಅನುಮತಿ ಇದೆ" ಎಂದು ಮಾತ್ರ ಅವರು ಹೇಳಿದರು.

ಕಾಡಿನಲ್ಲಿ ಸೌದೆಗೇನೂ ಕೊರತೆ ಇರಲಿಲ್ಲ. ದಹನಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡಲಾಯಿತು. ಮರುದಿನ ಆ ಸತ್ತ ವ್ಯಕ್ತಿಯ ತಂದೆತಾಯಿಗಳು ನಮ್ಮ ಶಿಬಿರಕ್ಕೆ ಬಂದರು. ಅವರನ್ನು ಹೇಗೆ ಎದುರಿಸಲಿ, ಏನು ಹೇಳಲಿ? ಎಂದು ಆಲೋಚಿಸುತ್ತಿದ್ದಾಗ ನನಗೆ ಬೆರಗಾಯಿತು. ಈ ಸುದ್ದಿಯನ್ನು ಕೇಳಿಯೂ ಅವರಲ್ಲಿ ಸ್ವಲ್ಪವೂ ಬದಲಾವಣೆಯಾಗಲಿಲ್ಲ. ಅದೆಷ್ಟು ಕಷ್ಟ ಎದುರಿಸಿ ಅವರು ಬಂದಿದ್ದರೆಂದರೆ ಈಗಾಗಲೇ ಅವರ ಕಣ್ಣೀರೆಲ್ಲಾ ಬತ್ತಿಹೋಗಿತ್ತು.

ರಂಗೂನಿನ ನಮ್ಮ ಸೇವಾಶ್ರಮದ ಅಧ್ಯಕ್ಷರು ಬಹಳ ದೊಡ್ಡ ಶ್ರೀಮಂತರು. ರಂಗೂನಿನಿಂದ ಹೊರಡುವಾಗ ತಮ್ಮ ಎಲ್ಲಾ ಸಾಮಾನುಗಳನ್ನು ಒಂದು ಲಾರಿಯಲ್ಲಿ ತುಂಬಿಸಿ ಹೊರಟಿದ್ದರು. ನಡುರಸ್ತೆಯಲ್ಲಿ ಸೇತುವೆಯೊಂದು ಕುಸಿದು ಬಿದ್ದ ಕಾರಣ ಆ ಲಾರಿಯನ್ನು ಅಲ್ಲೇ ಬಿಟ್ಟು ತಮ್ಮ ಸಣ್ಣ ಮಗುವನ್ನು ಎತ್ತಿಕೊಂಡು ಹೆಂಡತಿಯ ಜೊತೆಗೆ ನಡೆಯಲಾರಂಭಿಸಿದರು. ಹೆಚ್ಚಾಗಿ ನಡೆಯುವ ಅಭ್ಯಾಸವಿಲ್ಲ; ಜೊತೆಗೆ ಕಾಲರಾ ಅಂಟುವ ಭಯ. ನಮ್ಮಲ್ಲಿಗೆ ಬಂದಾಗ ಅವರ ಅಸಹಾಯಕ ಸ್ಥಿತಿಯನ್ನು ಕಂಡು ನನ್ನೆರಡೂ ಕಣ್ಣುಗಳು ಅಶ್ರುಭರಿತವಾಗಿದ್ದವು. ಅಷ್ಟು ಧನಿಕರಾದವರು ಭಿಕಾರಿಗಳಂತೆ ಬಂದಿದ್ದರು. ನಮ್ಮಲ್ಲಿದ್ದ ಬಟ್ಟೆಗಳನ್ನು ಆ ಮಗುವಿಗೆ ಕೊಟ್ಟೆವು.

"ಇಷ್ಟು ಜನ ಸಾಯುತ್ತಿದ್ದಾರೆ; ಇದಕ್ಕೆ ಪರಿಹಾರವೇನೂ ಇಲ್ಲವೆ?" ಎಂದು ಜನ ಆತಂಕದಿಂದ ಪ್ರಶ್ನಿಸುತ್ತಿದ್ದರು. ಇದಕ್ಕೆ ನಾನೇನೆಂದು ಉತ್ತರಿಸಲಿ? ಅವರಿಗೆ ಊಟವಿರಲಿಲ್ಲ, ಉಡಲು ಬಟ್ಟೆ ಇರಲಿಲ್ಲ, ಕುಡಿಯುವುದಕ್ಕೆ ನೀರೂ ಸಿಗುತ್ತಿರಲಿಲ್ಲ ಮೇಲಾಗಿ ಹಣವೂ ಇಲ್ಲ. ದಾರಿಯಲ್ಲಿ ಸಿಗುವ ಎಲ್ಲಾ ಕೆರೆಗಳನ್ನೂ ಸೈನಿಕರು ಕಾಯುತ್ತಿದ್ದರು. ಏಕೆಂದರೆ ಆ ನೀರು ಕಲುಷಿತವಾದರೆ ರೋಗಿಗಳ ಹಾಗೂ ಸಾವಿನ ಸಂಖ್ಯೆ ಹೆಚ್ಚುತ್ತದೆ. ಶರಣಾರ್ಥಿಗಳು ಅಕ್ಕಪಕ್ಕದ ಹಳ್ಳಿಗಳಲ್ಲಿ ನೀರಿಗಾಗಿ ಹಣವನ್ನು ಕೊಡಬೇಕಿತ್ತು. ಒಂದು ಲೋಟ ನೀರಿಗೆ ಐದು ಅಥವಾ ಹತ್ತು ರೂಪಾಯಿ! ದುಡ್ಡಿಲ್ಲದಿದ್ದರೆ ನೀರಿಲ್ಲ. ನಮ್ಮಲ್ಲಿಗೆ ಬಂದಾಗ ನೀರು ಬೇಕಾದರೆ, "ಎಷ್ಟು ದುಡ್ಡು ಕೊಡಬೇಕು?" ಎಂದು ಕೇಳುತ್ತಿದ್ದರು. "ಹಣ ಕೊಡಬೇಕಾಗಿಲ್ಲ" ಎಂದು ಹೇಳಿದಾಗ ಅವರಿಗೆ ಆಶ್ಚರ್ಯವಾಗುತ್ತಿತ್ತು. ಜನರ ಆ